ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **296/2020**

| | | |
|---|---|---|
| ಸಾಕ್ಷಿಯ ಹೆಸರುಃ | ಶಾಂತಪ್ಪ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಕನಕಪ್ಪ | ಚಾಸಾಃ 9 |
| ವಯಸ್ಸು ಃ | 48 ವರ್ಷ | ದಿಃ 17-03-2026 |
| ಉದ್ಯೋಗಃ | ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು 2019 ರಿಂದ ಇಲ್ಲಿಯವರೆಗೆ ಯಾದಗಿರಿ (ಗ್ರಾ) ಪೋಲಿಸ ಠಾಣೆಯಲ್ಲಿ ನಾನು ಮುಖ್ಯ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 08-02-2020 ರಂದು ರಾಃ 08.25 ಗಂಟೆ ಸುಮಾರಿಗೆ ನಾನು ಠಾಣೆಯಲ್ಲಿದ್ದಾಗ ಚಾಸಾಃ 1 ರವರು ಮುದ್ದೆ ಮಾಲು ಮತ್ತು ಜಪ್ತಿ ಪಂಚನಾಮೆ, ಆರೋಪಿಯನ್ನು ಹಾಜರು ಪಡಿಸಿದಾಗ ನಾನು ಸದರಿ ಆಧಾರದ ಮೇಲೆ ನಮ್ಮ ಠಾಣಾ ಗುನ್ನೆ ಸಂಖ್ಯೆಃ 21/2020 ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ಪ್ರ. ವ. ವರದಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿ ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಚಾಸಾಃ 4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಅದು ಜಪ್ತಿ ಪಂಚನಾಮೆ ಆಗಿದ್ದು ಅದನ್ನು ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಲೇ ನಿಪಿ-1 ಎಂದು ಸಾಕ್ಷಿಯ ಸಹಿ ನಿಪಿ-1(ಬಿ) ಎಂದು ಗುರುತಿಸಲಾಯಿತು.

ದಿನಾಂಕ 09-03-2020 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಕಳುಹಿಸಿರುತ್ತೇನೆ. ನಂತರ ಸದರಿ ವರದಿಯನ್ನು ದಿಃ 17-03-2020 ರಂದು ಪಡೆದಿರುತ್ತೇನೆ. ಸದರಿ ವರದಿಯನ್ನು ನಿಪಿ-3 ಎಂದು ಸಾಕ್ಷಿಯ ಸಹಿ ನಿಪಿ-3(ಎ) ಎಂದು ಗುರುತಿಸಲಾಯಿತು. ಅಬಕಾರಿ ಇಲಾಖೆಗೆ ದಿನಾಂಕಃ 09-03-2020 ರಂದು ನಿಪಿ-4 ರಂತೆ ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಾಲಯಿತು. ದಿನಾಂಕಃ 21-03-2020 ರಂದು ಮಾನ್ಯ ನ್ಯಾಯಾಲಯಕ್ಕೆ ಅಂತಿಮ

ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಆರೋಪಿ ಮತ್ತು ಮು. ಮಾ. ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಮ್. ಎನ್, ಡಿ ವಕೀಲರಿಂದ.</u>

1. ನಾನು ದಾಳಿಗೆ ಹೋಗಿರುವುದಿಲ್ಲ. ನನಗೆ ಈ ಪ್ರಕರಣಕ್ಕಿಂತ ಮುಂಚೆ ಆರೋಪಿತನನ್ನು ನೋಡಿರುವುದಿಲ್ಲ. ದಿನಾಂಕಃ 08-02-2020 ರಂದು ಚಾಸಾಃ 1 ರವರು ನನ್ನ ಮುಂದೆ ಮು. ಮಾ. ಆರೋಪಿ, ಜಪ್ತಿ ಪಂಚನಾಮೆಯನ್ನು ಹಾಜರು ಮಾಡಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ, ದಿನಾಂಕಃ 17-03-2020 ರಂದು ತಜ್ಞರ ವರದಿಗಾಗಿ ಕಳುಹಿಸಿರುವುದಿಲ್ಲ, ಅಬಕಾರಿ ಇಲಾಖೆಗೆ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ಕೂಡ ಚಾಸಾಃ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ